ಪುತ್ತೂರಿನಲ್ಲಿ ನಾಲ್ಕು ಕಾಲೇಜುಇದೆ. ಈಗ ಉಪ್ಪಿನಂಗಡಿಯಲ್ಲಿ 174 ಮಕ್ಕಳು application ಹಾಕಿದ್ದಾರೆ, ಆದರೆ ಅಲ್ಲಿ ಸೀಟಿಲ್ಲ. ವಿಟ್ಲದಲ್ಲಿ 135 ಮಕ್ಕಳು application ಹಾಕಿದ್ದಾರೆ, ಆದರೆ ಅಲ್ಲಿಯೂ ಸೀಟಿಲ್ಲ. ಪುತ್ತೂರಿನಲ್ಲಿ ಕೂಡ ಅದೇ ಸ್ಥಿತಿ ಇದೆ. ಅದರ ವಿಚಾರವಾಗಿ ಸರ್ಕಾರ ಏನುಕೆಲಸ ಮಾಡಿದೆ ಎನ್ನುವುದಕ್ಕೆ ನನಗೆ ಏನೂ ಉತ್ತರ ಬರಲಿಲ್ಲ. ಆದಕಾರಣ ನಮ್ಮ ಎಲ್ಲಾ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅವಕಾಶ ಕೊಡುವಂತಹ ವ್ಯವಸ್ಥೆಯಾಗಬೇಕಾಗಿದೆ, ಅದಕ್ಕೆ ಸರ್ಕಾರ ಏನು ಮಾಡುತ್ತಾರೆಂದು ಕೇಳಿದ್ದೇನೆ. ಅದಕ್ಕೆ ಉತ್ತರ ಬರಲೇ ಇಲ್ಲ.

ಅಧ್ಯಕ್ಷರು : ಅದಕ್ಕೆ ಉತ್ತರ ನಾಳೆ ಹೇಳುತ್ತಾರೆ.

ಶ್ರೀಮತಿ ಶಕುಂತಲಾ ಶೆಟ್ಟಿ : ನಾಳೆ ಉತ್ತರ ಕೊಡುತ್ತಾರಲ್ಲವೇ? ಇಲ್ಲದಿದ್ದರೆ ಊರಿಗೆ ಹೋಗುವ ಹಾಗೆ ಇಲ್ಲ.

ಅಧ್ಯಕ್ಷರು : ಕೊಡುತ್ತಾರೆ. ಈಗ ಮಾನ್ಯ ಹೆಚ್.ಡಿ. ರೇವಣ್ಣನವರು ಇಲ್ಲ. ಶ್ರೀಮಾನ್ ಪಿಳ್ಳಮುನಿಶಾಮಪ್ಪನವರು ಇಲ್ಲ, ಶ್ರೀಮಾನ್ ಎನ್.ಹೆಚ್. ಕೋನರೆಡ್ಡಿಯವರು ಕೇಳಿ.

7.ವಿಷಯ : ಧಾರವಾಡ ಜಿಲ್ಲೆಯ ಮಲಪ್ರಭಾ ಬಲದಂಡೆ ಕಾಲುವೆಯ ತುಪ್ಪರಿಹಳ್ಳ ಮೇಲು ಸೇತುವೆ ಒಡೆದು ರೈತರಿಗೆ ಆಗಿರುವ ಅಪಾರ ಹಾನಿಯ ಬಗ್ಗೆ.

ಶ್ರೀ ಎನ್.ಹೆಚ್. ಕೋನರೆಡ್ಡಿ (ನವಲಗುಂದ) :– ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ನವಲಗುಂದ ರೈತ ಬಂಡಾಯದಿಂದ ಗೆದ್ದಿರುವ ನಾನು ಇವತ್ತು ರೈತರ ಪರವಾಗಿ ಒಂದು ಪ್ರಶ್ನೆಯನ್ನು ಕೇಳುವಂತಹ ಭಾಗ್ಯ ಕೊಟ

ಟಿದ್ದಕ್ಕೆ ತಮಗೆ ವಿಶೇಷವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನನ್ನ ಮತ ಕ್ಷೇತ್ರದಲ್ಲಿ ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕು ಶಿರೂರ ಗ್ರಾಮದ ಹತ್ತಿರ ಮಲಪ್ರಭಾ ಬಲದಂಡೆ ಕಾಲುವೆಯ ತುಪ್ಪರಿಹಳ್ಳ ಮೇಲು ಸೇತುವೆ ಒಡೆದು ರೈತರಿಗೆ ಅಪಾರ ಹಾನಿಯಾಗಿದೆ. ಅದನ್ನು ತುರ್ತಾಗಿ ರಿಪೇರಿ ಮಾಡುವುದು ಬಹಳ ಅವಶ್ಯಕತೆಯಿದ್ದು, ಇದರಿಂದ ನವಲಗುಂದ, ರೋಣ, ನರಗುಂದ ಮತ್ತು ಹುಬ್ಬಳ್ಳಿ ಎಲ್ಲಾ ತಾಲ್ಲೂಕುಗಳಿಗೆ ನೀರು ಬಿಡದಿರುವುದಿಂದ ಕಳೆದ ಬಾರಿ ರೈತರಿಗೆ ಬಹಳ ಹಾನಿಯಾಯಿತು. ಆದರೆ ಇಲ್ಲಿಯವರೆಗೂ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆ ಕಾಲುವೆ ದಿನಾಂಕ : 19.12.2011ಕ್ಕೆ ಒಡೆದಿದೆ.

ಆದರೆ ಇದುವರೆಗೂ ಯಾವುದೇ ಕ್ರಮ ಜರುಗಿಸಿಲ್ಲ. ಹಿಂಗಾರು ಅಥವಾ ಮುಂಗಾರು ನೀರು ಕೊಡುತ್ತಾರೆಯೇ ಎನ್ನುವುದಕ್ಕೆ ಸರ್ಕಾರ ಸ್ಪಷ್ಟ ಪಡಿಸಬೇಕಾಗುತ್ತದೆ. ಅದಕ್ಕೆ total ಆಗಿ 2,000 ಕ್ಯೂಸೆಟ್ ನೀರು ಬೇಕಾಗುತ್ತದೆ. ಆದರೆ ಅಲ್ಲಿ temporary repair ಮಾಡಿದ್ದಾರೆ. ಅಲ್ಲಿ ಕೇವಲ 900 ಕ್ಯೂಸೆಕ್ಸ್ ನೀರು ಬರುತ್ತದೆ. ಅದಕ್ಕೆ ಸರ್ಕಾರ ಹೇಗೆ ಯುದ್ಧೋಪಾದಿಯಲ್ಲಿ ಕೆಲಸ ಮಾಡಿ ಮುಂಗಾರು ಅಥವಾ ಹಿಂಗಾರು ನೀರು ಬಿಡುತ್ತದೆನ್ನುವುದನ್ನು ರೈತರಿಗೆ ತಿಳಿಸಬೇಕಾಗುತ್ತದೆ. ಈಗಾಗಲೇ ಪೀಕು ಹಾಕುವುದಕ್ಕೆ ಚಾಲು ಮಾಡಿದ್ದಾರೆ. ನೀರಾವರಿ ಪೀಕು ಹಾಕಿದಾಗ ನೀರು ಬರದಿದ್ದಾಗ ನನ್ನ ಕ್ಷೇತ್ರವನ್ನು ಸೇರಿಕೊಂಡು ಐದು ತಾಲ್ಲೂಕಿನ ಜನರಿಗೆ ತೊಂದರೆಯಾಗುತ್ತದೆ. ಅದಕ್ಕೆ ಸರ್ಕಾರ ಇದರ ಬಗ್ಗೆ ಯಾವ ರೀತಿ ಕೆಲಸವನ್ನು ಜರುಗಿಸುತ್ತದೆ ಎಂದು ಕೇಳುತ್ತಾ, ಯದ್ಧೋಪಾದಿಯಲ್ಲಿ ಕೆಲಸವನ್ನು ಮಾಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಂ.ಬಿ. ಪಾಟೀಲ್ : ಆ ಬಗ್ಗೆ ನಾಳೆ ಅಥವಾ ನಾಡಿದ್ದರಲ್ಲಿ ಮಾಹಿತಿಯನ್ನು ಕೊಡುತ್ತೇನೆ.

ಅಧ್ಯಕ್ಷರು : ಈಗ ಶ್ರೀಮಾನ್ ಪಿ. ರಾಜೀವ್‌ರವರು ಕೇಳಿ.

8. ವಿಷಯ : ಕುಡಚಿ ಮತಕ್ಷೇತ್ರದಲ್ಲಿ ರಾತ್ರಿ ಭಾರೀ ಮಳೆ ಬಿದ್ದು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ ಹಾಗೂ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವ ಬಗ್ಗೆ.

ಶ್ರೀ ಪಿ. ರಾಜೀವ್ (ಕುಡಚಿ) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ತೀರ ಮತಕ್ಷೇತ್ರ ಕುಡಚಿಯಲ್ಲಿ ಮೊನ್ನೆ 5ನೇ ತಾರೀಖು ಮಳೆ ಮತ್ತು ಗಾಳಿಯಿಂದ ಸುಮಾರು 50ಕ್ಕಿಂತ ಹೆಚ್ಚು ವಿದ್ಯುತ್ ಕಂಬಗಳು ಬಿದ್ದಿವೆ. 20ಕ್ಕಿಂತ ಹೆಚ್ಚು ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟಿವೆ. ಸುಮಾರು 30 ರಿಂದ 40 ಮನೆಗಳು ಮತ್ತು ಪೌಲ್ಟ್ರಿ ಫಾರಂಗಳು ಕುಸುದು ಬಿದ್ದಿವೆ. ಇದುವರೆಗೆ ಇದರ ಬಗ್ಗೆ ಯಾವುದೇ ರೀತಿಯ ಪರಿಹಾರ ಕ್ರಮವನ್ನು ಕೈಗೊಂಡಿಲ್ಲ. ಲೈಟ್ ಕಂಬಗಳು ಕೂಡ ಬಂದಿವೆ ಇನ್ನೊಂದು ಬಹಳ ದೊಡ್ಡ ಸಮಸ್ಯೆ ಎಂದರೆ ವಿದ್ಯುತ್ ಸಂಪರ್ಕ ಯಾವಾಗ ಆಗಿದೆ ಅಲ್ಲಿಂದ ಇಲ್ಲಿಯವರೆಗೆ conductor ಗಳನ್ನು ಬದಲಿಸಿಲ್ಲ. ರಾತ್ರಿ ರೈತರು ಕೆಲಸಕ್ಕೆ ಹೋದಾಗ ವೈರುಗಳು ಹರಿದು ಬಿದ್ದಿರುತ್ತವೆ. ಪ್ರತಿವರ್ಷ